ಫ್ರಾಸಾ-1 ರವರನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 01-02-2025
ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

2. ಆರೋಪಿ ರೆಡ್ಡೆಪ್ಪಗೌಡ ಈತನು ಲೇ ಮಾದಿಗ ಸೂಳೆ ಮಗನೆ ನಿನ್ನ ಸೊಕ್ಕು ಬಹಳ ಆಗಿದೆ ನಿನಗೆ ಜೀವ ಸಹಿತ ಬಿಡುವುದಿಲ್ಲ ಎಂದು ಬೈದನು. ನಾನು ಮಾದಿಗ ಜಾತಿಗೆ ಸೇರಿದ ವಿಷಯ ಆರೋಪಿತರು ನಮ್ಮೂರವರೆ ಆಗಿರುವದರಿಂದ ಗೊತ್ತಿರುತ್ತದೆ. ಜಾತಿ ನಿಂಧನೆ ಮಾಡಿದ್ದರಿಂದ ನನ್ನ ಮನಸ್ಸಿಗೆ ನೋವಾಯಿತು. ನಂತರ ಪೊಲೀಸಠಾಣೆಗೆ ಹೋಗಿ ದೂರನ್ನು ಕೊಟ್ಟೆ. ಈಗ ಓದಿ ಹೇಳಿದ ದೂರನ್ನು ಪಿಎಸಐ ರವರು ಬರೆದರು ಅದನ್ನು ಓದಿ ಹೇಳಿದ ನಂತರ ಹೆಬ್ಬೆಟ್ಟಿನ ರುಜು ಮಾಡಿರುತ್ತೇನೆ. ಸದರಿ ದೂರನ್ನು ನಿ.ಪಿ.1 ಎಂದು ಗುರುತಿಸಲಾಯಿತು.

3. ಮರು ದಿನ ಪೊಲೀಸರು ಚಾಸಾ-2 ಮಲ್ಲಪ್ಪ ಮತ್ತು ಚಾಸಾ-3 ಹಣಮಂತ ಇವರ ಸಮಕ್ಷಮದಲ್ಲಿ ನಾನು ತೋರಿಸಿದ ಮೇರೆಗೆ ಗುನ್ಹಾ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಆ ಕಾಲಕ್ಕೆ 3 ಹಿಡಿಗಾತ್ರದ ಕಲ್ಲುಗಳು ಮತ್ತು 2 ಕಬ್ಬಿಣದ ರಾಡುಗಳನ್ನು ಅಮಾನತ್ತುಪಡಿಸಿಕೊಂಡರು. ಈಗ ಓದಿ ಹೇಳಿದ ಪಂಚನಾಮೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 3 ಹಿಡಿಗಾತ್ರದ ಕಲ್ಲುಗಳನ್ನು ಹಾಗೂ 2 ಕಬ್ಬಿಣದ ರಾಡುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ರಿಂದ 5 ಒಂದು ಕಾವು ಸಮೇತ ಕೊಡಲಿಯನ್ನು ಮು.ಮಾ.6 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ್.ಎಮ್.ಪಿ ವಕೀಲರಿಂದ

ಆರೋಪಿತರ ವಕೀಲರ ಕೋರಿಕೆಯ ಮೇರಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.